ಶ್ರೀ ಬಿ. ರಾಚಯ್ಯ.—ಈ ಬಗ್ಗೆ ನನ್ನ ಬಳಿ ಈಗ ವಿವರಗಳು ಇಲ್ಲ. ಇದರಲ್ಲಿ ನಾನು ಯಾವುದನ್ನೂ ಬಚ್ಚಿಟ್ಟಿಲ್ಲ. ಈ ಪ್ರಕರಣದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವ ಸಲುವಾಗಿ ನಾನು ಅಲ್ಲಿಗೆ ಎರಡು ಸಲ ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ನಾನು ಹೋದಾಗ ಅಲ್ಲಿನ ಜನ ಜಾಗೃತ ಸಮಿತಿಯವರ ಜೊತೆಗೆ ಹಾಗೂ ಅಲ್ಲಿನ ಮುನಿಸಿಪಾಲಿಟಿಯವರ ಜೊತೆ ಮಾತನಾಡಿದ್ದೇನೆ. ಈ ಪ್ರಕರಣದಲ್ಲಿ ಸೋಂದ ಹಿಂದೂ ಮತ್ತು ಮುಸಲ್ಮಾನರ ಕುಟುಂಬಗಳ ಜೊತೆಗೆ ಮಾತನಾಡಿದ್ದೇನೆ. ಈ ಬಗ್ಗೆ ಏನೇನು ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ನಾನು ಸಂಬಂಧಪಟ್ಟವರಿಗೆ ಸೂಕ್ತ ತಿಳಿವಳಿಕೆ ಕೊಟ್ಟು ಬಂದಿದ್ದೇನೆ. ಅನ್ಯಾಯಕ್ಕೆ ಒಳಗಾದ ಹಿಂದೂ ಮತ್ತು ಮುಸ್ಲಿಮರಿಗೆ ಸೂಕ್ತ ರಕ್ಷಣೆ ಕೊಟ್ಟಿದ್ದೇವೆ. ಇಂತಹವರಿಗೆ ಪರಿಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಇಲ್ಲಿ ೭೯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ ಎಂದು ಹೇಳಿದ್ದೀರಿ ಮತ್ತು ೯೦ ಜನರನ್ನು ದಸ್ತಗಿರಿ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಬಗ್ಗೆ ಹಿಂದೂ ಗಳೆಷ್ಟು ಮತ್ತು ಮುಸಲ್ಮಾನರೆಷ್ಟು ಎಂಬ ವಿವರಗಳನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ವಿವರಗಳು ಈಗ ನನ್ನ ಬಳಿ ಇಲ್ಲ. ಅದನ್ನು ತರಿಸಿಕೊಡುತ್ತೇನೆ.

## ಸಾಲೂರು ಗ್ರಾಮದಲ್ಲಿ ಆರೋಗ್ಯ ಘಟಕ

೫೯ (೨೦೩) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು.—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕು ಸಾಲೂರು ಗ್ರಾಮದಲ್ಲಿ ಆರೋಗ್ಯ ಘಟಕ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ?

ಆ) ಈ ವರೆಗೆ ಅಲ್ಲಿ ವೈದ್ಯಾಧಿಕಾರಿಯವರನ್ನು ನೇಮಿಸದಿರಲು ಕಾರಣಗಳೇನು ?

ಇ) ಶಿಕಾರಿಪುರ ತಾಲ್ಲೂಕಿನ ಬೇರೆ ಯಾವ ಯಾವ ಆರೋಗ್ಯ ಘಟಕಗಳಿಗೆ ವೈದ್ಯಾಧಿಕಾರಿಗಳಿರುವುದಿಲ್ಲ, ಈ ಬಗ್ಗೆ ಸರಕಾರದವರು ಕೈ ಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೪ ಮಾರ್ಚ್ ೧೯೮೪ ರಿಂದ (೪-೩-೧೪ರಿಂದ)

ಆ) ಒಬ್ಬ ವೈದ್ಯಾಧಿಕಾರಿಯನ್ನು ದಿನಾಂಕ ೨೭-೧೧-೮೬ ರಲ್ಲಿ ನೇಮಕ ಮಾಡಲಾಗಿದೆ.

ಪ್ರಾಥಮಿಕ ಆರೋಗ್ಯ ಘಟಕ, ಯಲಿಗೆರೆ ಇಲ್ಲಿ ಹಿನೇ ದರ್ಜೆ ವೈದ್ಯಾಧಿಕಾರಿಯು ಹುದ್ದೆಯಾಗಿರುವುದರಿಂದ ಜೂನ್ ೧೯೮೬ ರಿಂದ ಹುದ್ದೆ ಖಾಲಿ ಇದೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

## ಮಂತ್ರಿ ಮಂಡಲದ ಖರ್ಚಿನ ಬಗ್ಗೆ

೪೪ (೯) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದಿನ ಸರಕಾರದಲ್ಲಿ ಪ್ರತಿ ಸಚಿವರಿಗೆ ಒಂದು ವರ್ಷಕ್ಕೆ ಸರಾಸರಿ ಖರ್ಚಾಗುವ ಹಣವೆಷ್ಟು (ಪ್ರವಾಸ ಭತ್ಯೆ ಹಾಗೂ ಇತರ ಭತ್ಯೆ ಸೇರಿ ವಿವರಣೆ ನೀಡುವುದು)

ಆ) ಪ್ರಸಕ್ತ ಸರಕಾರದಲ್ಲಿನ ಪ್ರತಿ ಸಚಿವರುಗಳಿಗೆ ಒಂದು ವರ್ಷಕ್ಕೆ ಸರಾಸರಿ ಖರ್ಚಾಗುವ ಮೊಬಲಗೆಷ್ಟು (ಪ್ರವಾಸ ಭತ್ಯೆ ಹಾಗೂ ಇತರ ಭತ್ಯೆ ಸೇರಿ ಸಂಪೂರ್ಣ ವಿವರಗಳನ್ನೊದಗಿಸುವುದು)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ರೂ. ೧,೫೮,೦೫೭–೦೦

ಆ) ರೂ. ೧,೪೮,೬೯೯–೦೦

## ಮಾಗಡಿ ತಾಲ್ಲೂಕು ಚಿಕ್ಕಹಳ್ಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕದ ಬಗ್ಗೆ

೪೫ (೧೩೮) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ ಚಿಕ್ಕಹಳ್ಳಿ ಗ್ರಾಮದಲ್ಲಿ ಹಾಗೂ ಅದರ ಸುತ್ತಮುತ್ತಲಿನ ಸುಮಾರು ೫–೬ ಸಾವಿರ ಜನರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲದೆ ತೊಂದರೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಹಾಗಿದ್ದಲ್ಲಿ ಚಿಕ್ಕಹಳ್ಳಿ ಹಾಗೂ ಅದರ ಸುತ್ತಮುತ್ತಲಿನ ಜನತೆಯ ಅನುಕೂಲಕ್ಕಾಗಿ ಚಿಕ್ಕಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಇಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.

## ಬೆಂಗಳೂರು ನಗರದಲ್ಲಿರುವ ಗಾಲ್ಫ್ ಹಾಗೂ ರೇಸ್ ಕ್ಲಬ್ ಬಗ್ಗೆ

೪೬ (೬) ಶ್ರೀ ಗೋಪಾಲ ಮುಕುಂದ ಕಾನಡೆ. (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಮಧ್ಯ ಭಾಗದಲ್ಲಿರುವ ಗಾಲ್ಫ್ ಕ್ಲಬ್‌ನ ವಿಸ್ತೀರ್ಣವೆಷ್ಟು; ಈ ಜಾಗ ಎಷ್ಟು ಕಾಲದವರೆಗೆ ಗುತ್ತಿಗೆಗೆ ಕೊಡಲಾಗಿದೆ ಹಾಗೂ ಇದರಿಂದ ಸರ್ಕಾರಕ್ಕೆ ಬರುವ ವರ್ಷದ ಆದಾಯವೆಷ್ಟು ?

ಆ) ರೇಸ್ ಕೋರ್ಸ್ ಸ್ಥಳವನ್ನು ಯಾವ ವರ್ಷದವರೆವಿಗೆ ಸರ್ಕಾರದಿಂದ ಗುತ್ತಿಗೆಗೆ ಕೊಡ ಲಾಗಿದೆ. ಹಾಗೂ ಇದರಿಂದ ಸರ್ಕಾರಕ್ಕೆ ವರ್ಷದ ಆದಾಯವೆಷ್ಟು ? (ಈ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೫೪ ಎಕರೆ. ೧೯೭೬ರಿಂದ ೨೦೨೫ರವರೆಗೆ ಗುತ್ತಿಗೆಗೆ ಕೊಡಲಾಗಿದೆ. ನಾಮ ಮಾತ್ರದ ರೂಪದಲ್ಲಿ ವರ್ಷಕ್ಕೆ ೧೦೦.೦೦ ರೂ. ಗಳು ಬರುತ್ತವೆ.

ಆ) ೧–೧–೧೯೮೧ರಿಂದ ೩೦ ವರ್ಷಗಳ ಅವಧಿಯವರೆಗೆ ವರ್ಷವೊಂದಕ್ಕೆ ರೂ. ೫.೦೦ ಲಕ್ಷದಂತೆ ರೇಸ್‌ಕೋರ್ಸ್ ಸ್ಥಳವನ್ನು ಗುತ್ತಿಗೆಗೆ ಕೊಡಲಾಗಿದೆ.

ಸರ್ಕಾರಕ್ಕೆ ಬರುವ ಆದಾಯ.—

೧) ಗುತ್ತಿಗೆಯಿಂದ ವರ್ಷವೊಂದಕ್ಕೆ ರೂ. ೫ ಲಕ್ಷ

೨) ತೆರಿಗೆಯಿಂದ (ಬೆಂಗಳೂರು ಮತ್ತು ಮೈಸೂರು ಎರಡೂ ಸೇರಿ)

| | |
|---|---|
| ೧೯೫೫–೫೬ | ೫.೧೪೪೬ (ಕೋಟಿ ರೂ. ಗಳಲ್ಲಿ) |
| ೧೯೫೬–೫೭ | ೬.೪೯೧೨ ( ,, ) |
| ೧೯೫೭–೫೮ | ೫.೧೪೭೭ ( ,, ) |
| ೧೯೫೮ರ ಡಿಸೆಂಬರ್ ಅಂತ್ಯದವರೆಗೆ | ೩.೧೦೦೪ ( ,, ) |